**ಮುಖ್ಯ ನ್ಯಾಯಾಧೀಶರು, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.**

ಎಂ.ವಿ.ಸಿ. ಸಂಖ್ಯೆ: **2925/2025**

**ಆರ್.ಡಬ್ಲ್ಯೂ -1**

| | |
|---|---|
| ಹೆಸರು | ಶ್ರೀ ಸುಬ್ಬಯ್ಯ |
| ತಂದೆಯ ಹೆಸರು | ಸುಬ್ಬಯ್ಯ |
| ವಯಸ್ಸು | **28** ವರ್ಷ |
| ವೃತ್ತಿ | ರಿಲೈಯನ್ಸ್ ಜನರಲ್ ವಿಮಾ ಕಂಪೆನಿಯಲ್ಲಿ ಡೆಪ್ಯೂಟಿ ಮ್ಯಾನೇಜರ್ |
| ವಿಳಾಸ | ಬೆಂಗಳೂರು |

**ದಿನಾಂಕ: 15.07.2026 ರಂದು ಆರ್.ಡಬ್ಲ್ಯೂ -1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು:**

**ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ವಕೀಲರಿಂದ:**

1) ನಾನು ಈ ಪ್ರಕರಣದಲ್ಲಿ **2** ನೇ ಎದುರುದಾರ ವಿಮಾ ಕಂಪೆನಿಯ ಡೆಪ್ಯೂಟಿ ಮ್ಯಾನೇಜರ್ ಆಗಿದ್ದೇನೆ. ನಮ್ಮ ಕಂಪೆನಿಯಿಂದ ನನಗೆ ನೀಡಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ನಿ.ಆರ್.**1** ಎಂದು ಗುರುತಿಸಿದ್ದೇನೆ.

2) ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯಕ್ಕೆ ಬದಲಾಗಿ, ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು

ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಯ ಮೇರೆಗೆ ಮತ್ತು ಅದಕ್ಕೆ ಅನುಸಾರವಾಗಿ ನನ್ನ ವಕೀಲರು ಸಿದ್ಧಪಡಿಸಿದ್ದಾರೆ.

3) ಕೆಎ-**07**-ಇಜಿ-**6793** ಹೋಂಡಾ ಆ್ಯಕ್ಟೀವಾ ದ್ವಿಚಕ್ರ ವಾಹನಕ್ಕೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್.**2** ಎಂದು ಗುರುತಿಸಿದ್ದೇನೆ.

**ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದಾರೆ. ನ್ಯಾಯ ಹಿತರಕ್ಷಣೆಯ ದೃಷ್ಟಿಯಿಂದ ಸಮಯಾವಕಾಶ ನೀಡಲಾಗಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.